11 ನಗರದ ಸಂಚಾರ ಪೋಲೀಸ್ ಠಾಣೆಯ ಸಿಬ್ಬಂದಿ ಪ್ರತಿನಿತ್ಯ ಸಂಚಾರ ನಿಯತ್ರಣ ಹಾಗೂ ಸುಧಾರಣೆಗಳನ್ನು ಕೈಗೊಳ್ಳುತ್ತಿದ್ದಾರೆ

ಇ) ಮಂಡ್ಯ ನಗರದ ಮೈಸೂರು, ಬೆಂಗಳೂರು, ಹೆದ್ದಾರಿಯ 3 ಪ್ರಮುಖ ವೃತ್ತಗಳಲ್ಲಿ (ಸರ್ಕಲ್‌ಗಳಲ್ಲಿ) ಟ್ರಾಫೀಕ್ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಿರುತ್ತೆ

ಮಂಗಳೂರು ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 66(309)

ಸದಸ್ಯರ ಹೆಸರು ಶ್ರೀ ಮಲ್ಲಿಕಾರ್ಜುನ ಕೆ ಬಿ (ಬೀರೂರು)

ಉತ್ತರಿಸುವ ಸಚಿವರು. ಶ್ರೀ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ ಮಂಗಳೂರು ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ನಡೆದಿರುವ ಅವ್ಯವಹಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಬಂದಿದ್ದಲ್ಲಿ, ಇದರಿಂದ ಸರ್ಕಾರದ ಬೊಕ್ಕಸಕ್ಕೆ ಆದ ನಷ್ಟ ಎಷ್ಟು?

ಇ ಈ ಅವ್ಯವಹಾರದಲ್ಲಿ ಎಷ್ಟು ಅಧಿಕಾರಿಗಳು ಹಾಗೂ ಅಧಿಕಾರೇತರರು ಭಾಗಿಯಾಗಿರುತ್ತಾರೆ (ವಿವರ ನೀಡುವುದು) ಪ್ರಕರಣದಲ್ಲಿ ಭಾಗಿಯಾದವರ ಮೇಲೆ ತೆಗೆದುಕೊಂಡಿರುವ ಕ್ರಮವೇನು?

ಉತ್ತರ

ಅ ಹೌದು

ಆ 1998-99ನೇ ಸಾಲಿನ ಲೆಕ್ಕಪತ್ರದ ಅಂತಿಮ ಆಡಿಟ್ ವರದಿ ಪ್ರಕಾರ ರೂ 65,01,501-00

ಇ ಈ ಕೆಳಕಂಡ ಅಧಿಕಾರಿ ನೌಕರರು ಈ ಪ್ರಕರಣದಲ್ಲಿ ಭಾಗಿಯಾಗಿದ್ದು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು

ಅಧಿಕಾರಿಗಳು

1 ಶ್ರೀ ಶಿವರಾಜ್ ಪಾಟೀಲ್, ಪ್ರಾ ಸಾ ಅ

2 ಶ್ರೀ ಬಿ ನಾಗರಾಜ್, ಖಜಾನೆ ಮತ್ತು ತೆರಿಗೆ ಅಧಿಕಾರಿ

ಸಿಬ್ಬಂದಿ ವರ್ಗದವರು

1 ಡಿ ಪಿ ರಂ, ದ್ವಿ ದ ಸ

2 ಶ್ರೀ ಮುರಳಿ ಬೋಳಾರ್ ಲೆಕ್ಕಾಧೀಕ್ಷಕರು

ಇವರಲ್ಲಿ ಶ್ರೀ ಶಿವರಾಜ್ ಪಾಟೀಲ್, ಪ್ರಾ ಸಾ ಅ, ಶ್ರೀ ಬಿ ನಾಗರಾಜ್, ಖಜಾನೆ ಮತ್ತು ತೆರಿಗೆ ಅಧಿಕಾರಿ ಹಾಗೂ ಶ್ರೀ ಮುರಳಿ ಬೋಳಾರ್, ಲೆಕ್ಕಾಧೀಕ್ಷಕರು ಇವರ ಅಮಾನತ್ತನ್ನು ತೆರವುಗೊಳಿಸಿ ಸಿಓಡಿಯಿಂದ ವಿಚಾರಣೆಯನ್ನು ಕಾಯ್ದಿರಿಸಿ ಪುನಃ ಸೇವೆಗೆ ನೇಮಿಸಿಕೊಳ್ಳಲಾಗಿದೆ

ಈ ಪ್ರಕರಣದ ಬಗ್ಗೆ ಸಿ ಓ ಡಿ ತನಿಖೆ ಪ್ರಗತಿಯಲ್ಲಿದೆ

ಚಿಕ್ಕಮಗಳೂರು ಜಿಲ್ಲೆಯಲ್ಲಿ 1999-2000 ಹಾಗೂ 2000-2001ನೇ ಸಾಲಿನಲ್ಲಿ ಕೆ ಎಸ್ ಆರ್ ಟಿ ಸಿ ಶೆಡ್ಯೂಲ್ಗಳ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 67(307)

ಸದಸ್ಯರ ಹೆಸರು ಶ್ರೀ ಕೆ ಬಿ ಮಲ್ಲಿಕಾರ್ಜುನ್(ಬೀರೂರು)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹ್ಮದ್(ಸಾರಿಗೆ ಸಚಿವರು)

ಪ್ರಶ್ನೆ

1) ಚಿಕ್ಕಮಗಳೂರು ಜಿಲ್ಲೆಯಲ್ಲಿ 1999-2000 ಹಾಗೂ 2000-2001ನೇ ಸಾಲಿನಲ್ಲಿ ಎಷ್ಟು ಕೆ ಎಸ್ ಆರ್ ಟಿ ಸಿ ಶೆಡ್ಯೂಲ್(ಮಾರ್ಗಗಳು) ಇದ್ದವು? (ವಿವರ ನೀಡುವುದು)

2) ಯಾವ ಯಾವ ಕಾರಣಗಳಿಂದ ಈ ಶೆಡ್ಯೂಲ್ಗಳನ್ನು ರದ್ದು ಪಡಿಸಲಾಗಿದೆ

3) ರದ್ದು ಪಡಿಸಿರುವ ಶೆಡ್ಯೂಲ್ಗಳ (ಮಾರ್ಗ) ವಿವರ ನೀಡುವುದು